# <u>ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು</u>

ಸಂಖ್ಯೆ: ಸಿಎಂಸಿ/ಆರ್‌ಎಸ್/ಮಿಸ್/ 05/07-08 ದಿನಾಂಕ: 03/10/2007

## <u>ಚಿಕ್ಕಮಗಳೂರು ನಗರಸಭೆಯ ಮಳಿಗೆಗಳ ಪರವಾನಗಿ ಫೀ ಆಧಾರದಲ್ಲಿ ಮರು ಟೆಂಡರ್ ಕಂ ಹರಾಜು ಇಸ್ತಿಹಾರ್</u>

**ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ,**

**ಕೆ.ಎಂ. ರಸ್ತೆ ಸಂತೆ ಮೈದಾನದ ಒಳಗೆ ಐ.ಡಿ.ಎಸ್.ಎಂ.ಟಿ. ಯೋಜನೆಯಲ್ಲಿ ನಿರ್ಮಿಸಿರುವ 10 ವಾಣಿಜ್ಯ ಹಾಗೂ ಮತ್ತು 44 ತರಕಾರಿ ಕಟ್ಟೆಗಳನ್ನು ಉಪಯೋಗಿಸಲು 20 ವರ್ಷಗಳ ಅವಧಿಗೆ ಟೆಂಡರ್ ಕಂ ಹರಾಜು ಮೂಲಕ ವಿಲೇಮಾಡಲು ದಿನಾಂಕ: 31-08-2007 ರಂದು ಹರಾಜು ಇಸ್ತಿಯಾರ್ ಹೊರಡಿಸಿದ್ದು ಕಾರಣಾಂತರದಿಂದ ಮುಂದೂಡಲಾದ ಟೆಂಡರ್ ಕಂ ಹರಾಜು ಪ್ರಕ್ರಿಯೆಯನ್ನು ದಿನಾಂಕ: 25-10-2007 ರಂದು ಬೆಳಿಗ್ಗೆ 11-00 ಗಂಟೆಗೆ ಸಂತೆ ಮೈದಾನದ ಒಳಗೆ ತರಕಾರಿ ಕಟ್ಟೆಗಳ ಮುಂಭಾಗದಲ್ಲಿ ಟೆಂಡರ್ ಕಂ ಹರಾಜು ಮಾಡಲಾಗುವುದು. ವಿವರ ಈ ಕೆಳಕಂಡಂತೆ ಇರುತ್ತದೆ.**

**:ವಿವರ:**

| ಕ್ರ. ಸಂ | ಬಾಬುಗಳ ವಿವರ | ಮಳಿಗೆಗಳ ಸಂಖ್ಯೆ | ಒಟ್ಟು | ಹರಾಜಿನಲ್ಲಿ ಭಾಗವಹಿಸಲು ಕಟ್ಟಬೇಕಾದ ಠೇವಣಿ | ನಿಗದಿ ಪಡಿಸಿದ ಬಾಡಿಗೆ | ಹರಾಜಿನ ದಿನಾಂಕ | ಹರಾಜು ಮಾಡುವ ಸ್ಥಳ | ಸಮಯ |
|---|---|---|---|---|---|---|---|---|
| 1 | ಕೆ.ಎಂ. ರಸ್ತೆಯ ಸಂತೆ ಮೈದಾನದ ಒಳಗಡೆ ಐಡಿಎಸ್ಎಂಟಿ ಯೋಜನೆಯಡಿಯಲ್ಲಿ ಹೊಸದಾಗಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳು. | 1ರಿಂದ10 ಮಳಿಗೆ ನಂ 1 - ಎಸ್‌ಸಿ /ಎಸ್.ಟಿ ಮಳಿಗೆ ನಂ 7 - ಎಸ್‌ಸಿ /ಎಸ್.ಟಿ | 10 | 5000.00 | 3050 | 25/10/07 | ಸಂತೆ ಮೈದಾನದ ಒಳಗೆ ತರಕಾರಿ ಕಟ್ಟೆ ಮುಂಭಾಗದಲ್ಲಿ | ಬೆಳಿಗ್ಗೆ 11-00 ಗಂಟೆಗೆ |
| 2 | ಕೆ.ಎಂ. ರಸ್ತೆಯ ಸಂತೆ ಮೈದನದ ಒಳಗಡೆ ಐಡಿಎಸ್ಎಂಟಿ ಯೋಜನೆ ಯಡಿಯಲ್ಲಿ ಹೊಸದಾಗಿ ನಿರ್ಮಿಸಿರುವ ತರಕಾರಿ ಕಟ್ಟೆಗಳು. (ಹೊರಭಾಗ ಮತ್ತು ಒಳಭಾಗ) | 1-22 ಹೊರಭಾಗ ಕಟ್ಟೆಗಳು 1-22 ಒಳಭಾಗ ಕಟ್ಟೆಗಳು (1.7.8.14.21. 22.28.35.42. 43 ಮಳಿಗೆಗಳು ಎಸ್.ಸಿ, ಎಸ್.ಟಿ ಯವರಿಗೆ ಮಾತ್ರ) | 44 | 5000.00 | 3300 | 25/10/07 | | |
| 3 | ಕೆ.ಎಂ. ರಸ್ತೆ ಹತ್ತಿರ ಐಡಿಎಸ್ಎಂಪಿ ಮಳಿಗೆಗಳು | 7 | 1 | 5000.00 | 3000 | 25/10/07 | | |

## <u>ಷರತ್ತುಗಳು</u>

1. ಹರಾಜಿನಲ್ಲಿ ಹಿಂತಿರುಗಿಸಲಾಗದ ಠೇವಣಿ ಮೊತ್ತಕ್ಕೆ ಬಿಡ್ ಮಾಡಲು ಇಷ್ಟವುಳ್ಳವರು ವಾಣಿಜ್ಯ ಮಳಿಗೆ ರೂ. **5,000/-** ಹಾಗೂ ತರಕಾರಿ ಕಟ್ಟೆಗಳಿಗೆ ಪ್ರತಿ ಕಟ್ಟೆಗೆ ರೂ. **2000/-** ರಂತೆ ಠೇವಣಿ ಮಾಡಿ ಹರಾಜಿನಲ್ಲಿ ಬಿಡ್ ಮಾಡಬಹುದು ಟೆಂಡರ್ ಸಲ್ಲಿಸುವವರು ಡಿ.ಡಿ ಅಥವಾ ನಗರಸಭೆಯಲ್ಲಿ ನಗದು ಪಾವತಿಸಿ, ದಿ.**25-10-2007** ರಂದು **11.00** ಘಂಟೆ ಒಳಗೆ ಟೆಂಡರ್ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು ಹಿಂತಿರುಗಿಸಲಾಗದ ಠೇವಣಿ ಮೊಬಲಗನ್ನು ಸ್ಪಷ್ಟವಾಗಿ ನಮೂದಿಸಬೇಕು.ಈ ಮೊತ್ತದ ಶೇ **25** ರಷ್ಟು ಮೊತ್ತವನ್ನು ಟೆಂಡರ್ ಆದ ದಿನದಂದು ಪಾವತಿಸತಕ್ಕದ್ದು ಹಾಗೂ ಉಳಿದ ಮೊತ್ತವನ್ನು ಟೆಂಡರ್ ಆದ ದಿನಾಂಕದಿಂದ ಏಳು ದಿನಗಳೊಳಗಾಗಿ ಪಾವತಿಸತಕ್ಕದ್ದು ತಪ್ಪಿದಲ್ಲಿ ಹರಾಜಿನಲ್ಲಿ ಭಾಗವಹಿಸಲು ಪಾವತಿಸಿದ್ದ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಎರಡನೇ ಹೆಚ್ಚುವರಿ ನಮೂದಿಸಿರುವ/ಕೂಗಿರುವ ಬಿಡ್ಡುದಾರರಿಗೆ ಪರಿಗಣಿಸಲಾಗುವುದು ಹಾಗೂ ಎರಡನೇ ಬಿಡ್ಡುದಾರರು ನಗರಸಭೆ ವಿಧಿಸುವ ಷರತುಗಳಿಗೆ ಬದ್ಧರಾಗಿರತಕ್ಕದ್ದು.
2. ಹರಾಜು ಪ್ರಕ್ರಿಯೆ ಮುಗಿದ ನಂತರ ಟೆಂಡರ್ ತೆರೆಯಲಾಗುವುದು. ಹಾಗೂ ಟೆಂಡರ್‌ನಲ್ಲಿ ನಮೂದಿಸಿರುವ ದರ ಮತ್ತು ಬಹಿರಂಗ ಹರಾಜು ಮುಖಾಂತರ ಸೂಚಿಸಿರುವ ದರ ಹೋಲಿಕೆ ಮಾಡಿ ಹಿಂತಿರುಗಿಸಲಾರದಂಥ ಠೇವಣಿ ಮೊತ್ತ ಹೆಚ್ಚು ನಮೂದಿಸಿರುವವರಿಗೆ ಮಳಿಗೆ ಬಿಟ್ಟು ಕೊಡಲಾಗುವುದು.
3. ಪ್ರತಿ ಮಳಿಗೆಗೆ ನಿಗಧಿಪಡಿಸುವ ಶುಲ್ಕಕ್ಕೆ ಶೇ. **10** ರಂತೆ ಮೂರು ವರ್ಷಕ್ಕೊಮ್ಮೆ ಹೆಚ್ಚಿಸಲಾಗುವುದು.
4. ಸರ್ಕಾರಿ ನಿಯಮಾನುಸಾರ ಪ.ಜಾ ಹಾಗೂ ಪ.ಪಂ ದವರಿಗೆ ಶೇ.**18** ರಂತೆ ಹತ್ತು ಮಳಿಗೆಗಳಿಗೆ ರೋಸ್ಟರ್ ಪದ್ದತಿ ಅನುಸಾರ ಮಳಿಗೆ ಸಂಖ್ಯೆ **1** ಮತ್ತು **7** ನ್ನು ಹಾಗೂ **44** ತರಕಾರಿ ಕಟ್ಟೆಗಳಲ್ಲಿ ಕಟ್ಟೆ ನಂ. **1, 7, 8, 14, 21, 22, 28, 35, 42, 43,** ಒಟ್ಟು

ಹತ್ತು ತರಕಾರಿ ಕಟ್ಟೆಗಳನ್ನು ಮೀಸಲಾಗಿಟ್ಟಿರುತ್ತದೆ. ಈ ಕಟ್ಟೆಗಳಿಗೆ ಕ್ರಮವಾಗಿ ಪ.ಜಾ, ಪ.ಪಂ ಜನಾಂಗದವರು ಮಾತ್ರ ಭಾಗವಹಿಸಲು ಆಸ್ಪದವಿರುತ್ತದೆ. ಈ ಬಗ್ಗೆ ಸೂಕ್ತ ದಾಖಲೆ ಒದಗಿಸಬೇಕಾಗುತ್ತದೆ.

5. ಮಳಿಗೆಯ ಟೆಂಡರ್ ಕಂ ಹರಾಜು ಅಖೈರು ಬಿಡ್‌ದಾರರು ಮಳಿಗೆಯನ್ನು ವಶಕ್ಕೆ ತೆಗೆದುಕೊಳ್ಳುವ ಸಮಯದಲ್ಲಿ ಭದ್ರತೆಗಾಗಿ ತನ್ನ ಸ್ಥಿರಾಸ್ತಿಯನ್ನು ಅಥವಾ ಒಬ್ಬ ಸ್ಥಿರಾಸ್ತಿವುಳ್ಳ ಜಾಮೀನುದಾರನ ಸ್ಥಿರಾಸ್ತಿಯನ್ನು ಭದ್ರತೆಗಾಗಿ ಅಡಮಾನ ಮಾಡತಕ್ಕದ್ದು.
6. ಬಹಿರಂಗ ಹರಾಜು ಮತ್ತು ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸುವ ಅಥವಾ ಸೂಕ್ತರೀತಿಯಲ್ಲಿ ಮಾರ್ಪಡಿಸುವ ಅಧಿಕಾರ ನಗರಸಭೆಗೆ ಇರುತ್ತದೆ.
7. ನಗರಸಭೆಯಿಂದ ಟೆಂಡರ್‌ನಲ್ಲಿ ಪಡೆದು ಬಿಡ್ಡುದಾರನ್ನು ಮಳಿಗೆಯನ್ನು ಹಸ್ತಾಂತರಿಸಿದ ದಿನಾಂಕದಿಂದ 20 ವರ್ಷಗಳ ಅವಧಿಗೆ ಉದ್ದಿಮೆ ಮಾಡಲು ಆಸ್ಪದವಿರುತ್ತದೆ. ಟೆಂಡರ್/ಹರಾಜು ಅವಧಿ ಮುಕ್ತಾಯವಾದ ನಂತರ ನಗರಸಭೆಗೆ ಮಳಿಗೆಯನ್ನು ಹಸ್ತಾಂತರಿಸ ತಕ್ಕದ್ದು. ಅವಧಿ ಪೂರ್ವವಾಗಿ ಮಳಿಗೆ ಹಸ್ತಾಂತರಿಸಿದ ಬಗ್ಗೆ ನಗರಸಭೆ ಯಾವುದೇ ಆರ್ಥಿಕ ಹೊಣೆಗಾರಿಕೆಗೆ ಜವಾಬ್ದಾರಿಯಾಗುವುದಿಲ್ಲ.
8. ಮಳಿಗೆಯನ್ನು ಯಾವುದೇ ರೀತಿಯ ಅಡಮಾನ, ಸಾಲ ಅಥವಾ ಮಾರಾಟ ಮಾಡಲು ಹಕ್ಕಿರುವುದಿಲ್ಲ.
9. ಹರಾಜು / ಟೆಂಡರನ್ನು ಒಪ್ಪಿಕೊಳ್ಳಲು ಅಥವಾ ಯಾವ ಕಾರಣವನ್ನು ತಿಳಿಸದೇ ತಿರಸ್ಕರಿಸುವ ಹಕ್ಕು ನಗರಸಭೆಗೆ ಇರುತ್ತದೆ.
10. ಹರಾಜು/ಟೆಂಡರ್ ಖಾಯಂ ಆಗಿರುವ ವಿಷಯವನ್ನು ಅಖೈರು ಸವಾಲುದಾರರಿಗೆ ಬರವಣಿಗೆ ಮೂಲಕ ತಿಳಿಯಪಡಿಸಿದ ಕೂಡಲೇ ಸವಾಲುದಾರನು ಪರವಾನಗಿ ಫೀ ಪಾವತಿದಾರನೆಂದು ಕರೆಯಲ್ಪಡುತ್ತದೆ. ಈ ರೀತಿ ಬರವಣಿಗೆ ಮೂಲಕ ಅವರ ಸವಾಲನ್ನು ಅಂಗೀಕರಿಸುವುದಾಗಿ ತಿಳಿಸಿದ ನಂತರ ಹರಾಜು ಇಸ್ತಿಹಾರ್‌ನಲ್ಲಿ ವಿಧಿಸುವ ಷರತ್ತಿನಂತೆ ತಾನು ಮತ್ತು ತನ್ನ ವಾರಸುದಾರರು ಬದ್ಧರಾಗಿರುತ್ತೇವೆಂತಲೂ ಮತ್ತು ಆಗಿಂದಾಗ್ಗೆ ನಗರಸಭಾ ಕಛೇರಿಯಿಂದ ಕೊಡಬಹುದಾದ ಹುಕ್ಕುಂಗಳಿಗೆ ಬದ್ಧರಾಗಿರುತ್ತೇವೆಂದು ಛಾಪಾ ಕಾಗದದಲ್ಲಿ ಸ್ಟ್ಯಾಂಪ್ ಕಾಯ್ದೆ(ಸ್ಟ್ಯಾಂಪ್ ರೂಲ್ಸ್) ಅನುಸರಿಸಿ ಬರೆದು ಸ್ವಂತ ಖರ್ಚಿನಿಂದ ನೊಂದಣಿ ಮಾಡಿಸಿಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಮರು ಹರಾಜಿನಲ್ಲಿ ಆಗುವ ನಷ್ಟವನ್ನು ಹರಾಜುದಾರರು ಕಟ್ಟಿಕೊಡಬೇಕಾಗುತ್ತದೆ. ಆದಾಯ ಬಂದಲ್ಲಿ ಅವರಿಗೆ ಯಾವ ಹಕ್ಕು ಇರುವುದಿಲ್ಲ. ಒಪ್ಪಂದ ಪತ್ರ ಮಾಡದೇ ಯಾವ ಕಾರಣದದಿಂದಲೂ ಪರವಾನಗಿ ಫೀ ಪಾವತಿದಾರನಾಗಿರುವುದಿಲ್ಲ ಹಾಗೂ ಅವರಿಗೆ ಯಾವ ಹಕ್ಕು ಇರುವುದಿಲ್ಲ. ಆದೇಶವನ್ನು ಮೀರಿ ಒಪ್ಪಂದ ಪತ್ರವನ್ನು ಷರತ್ತಿನಂತೆ ಮಾಡದೇ ಇದ್ದ ಪಕ್ಷದಲ್ಲಿ ಮರು ಹರಾಜಿನಲ್ಲಿ ಆಗುವಂತಹ ನಷ್ಟವನ್ನು ಅಖೈರು ಬಿಡ್‌ದಾರರಿಂದ ವಸೂಲು ಮಾಡಲಾಗುವುದು.
11. ಪರವಾನಗಿ ಫೀ ಪಾವತಿದಾರನು ಯಾವುದೇ ಕಾರಣದಿಂದಲೂ ಒಳಗುತ್ತಿಗೆ ಮಾಡಕೂಡದು. ಈ ರೀತಿ ಮಾಡಿದ್ದು ಕಂಡುಬಂದಲ್ಲಿ ಸದರಿ ಪರವಾನಗಿಯನ್ನು ರದ್ದುಪಡಿಸಿ ಠೇವಣಿಯ ಹಣವನ್ನು ಮುಟ್ಟುಗೋಲು ಹಾಕಿಕೊಂಡ ಕೂಡಲೇ ಅವರ ಹಕ್ಕನ್ನು ರದ್ದುಪಡಿಸಿ ನಗರಸಭಾ ಹರಾಜು ಮಳಿಗೆ ಹೇಗಿದೆಯೋ ಹಾಗೆಯೇ ನಗರಸಭೇಯ ಸ್ವಾಧೀನಪಡಿಸಿಕೊಳ್ಳಲಾಗುವುದು. ಮತ್ತು ಪರವಾನಗಿ ವಾಯಿದೆಯವರೆಗೆ ಆಗಬಹುದಾದ ನಷ್ಟಕ್ಕೆ ಅವರನ್ನೇ ಗುರಿಪಡಿಸಿ ಅವರಿಂದ ವಸೂಲಿ ಮಾಡಲಾಗುವುದು.
12. ಪರವಾನಗಿ ಫೀ ಮೊಬಲಗನ್ನು ಪ್ರತಿ ತಿಂಗಳು 5ನೇ ದಿನಾಂಕದೊಳಗೆ ನಗರಸಭಾ ಕಛೇರಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು. ಈ ರೀತಿ ಪಾವತಿ ಮಾಡುವುದನ್ನು ಮೂರು ತಿಂಗಳು ತಪ್ಪಿಸಿದರೆ ಪರವಾನಗಿಯನ್ನು ರದ್ದುಪಡಿಸಿ ಮಳಿಗೆಯನ್ನು ನಗರಸಭೆ ವಶಕ್ಕೆ ಪಡೆಯಲಾಗುವುದು.
13. ಮೇಲ್ಕಂಡಂತೆ ವಾಯಿದೆವರೆವಿಗೆ ಸರಿಯಾಗಿ ಪಾವತಿಯಾಗದೇ ನಿಲ್ಲಿಸಿದ ಬಾಕಿಗಳ ಮೇಲೆ ಹಣ ಪಾವತಿಸುವ ತಾರೀಖಿನವರೆವಿಗೆ ವಾರ್ಷಿಕ ಶೇಕಡ 18-00 ರಂತೆ ಬಡ್ಡಿ ವಸೂಲು ಮಾಡಬಹುದಾಗಿರುತ್ತೆ. ಹಾಗೂ ಬಾಡಿಗೆ ಪಾವತಿಯಾಗದಿದ್ದಲ್ಲಿ ಅಂಗಡಿಯನ್ನು ಮುಚ್ಚಲು ಮತ್ತು ಬಾಕಿ ವಸೂಲಿಗಾಗಿ ಕಾನೂನು ಕ್ರಮ ಜರುಗಿಸಲು ಪೌರಾಯುಕ್ತರಿಗೆ ಅಧಿಕಾರ ಇರುತ್ತದೆ.
14. ಚಾಲ್ತಿ ಸಾಲಿನಲ್ಲಿ ಹಿಂದಿನ ಸಾಲಿನಲ್ಲಿ ಸುಸ್ತಿದಾರರಾಗಿರುವ ಪರವಾನಗಿ ಫೀ ಪಾವತಿದಾರರು ತಮ್ಮ ಖಾತೆಯನ್ನು ಬೇಬಾಕಿ ಮಾಡದ ಹೊರತು ಹರಾಜಿನಲ್ಲಿ ಭಾಗವಹಿಸಲು ಅಧಿಕಾರವಿರುವುದಿಲ್ಲ.
15. ಕಟ್ಟಡದ ಬಾಬ್ತು, ವಿದ್ಯುಚ್ಛಕ್ತಿ ತೆರಿಗೆ ಬಗ್ಗೆ ಠೇವಣಿ ಆಗಿ ರೂ. 1000-00 ಹರಾಜು ಖಾಯಂ ಆದ ಕೂಡಲೇ ನಗರಸಭೆಗೆ ಜಮಾ ಮಾಡತಕ್ಕದ್ದು ಹಾಗೂ ಪ್ರತಿ ತಿಂಗಳು ಪರವಾನಗಿ ಫೀ ಪಾವತಿದಾರರು ವಿದ್ಯುಚ್ಛಕ್ತಿ ಶುಲ್ಕ ಕಟ್ಟ ತಕ್ಕದ್ದು.
16. ಮೇಲ್ಕಂಡ ಹರಾಜಿನಲ್ಲಿ ಅಂಗೀಕರಿಸಲ್ಪಟ್ಟ ಪರವಾನಗಿ ಫೀ ಪಾವತಿದಾರರಿಗೆ ಸದರಿ ಮಳಿಗೆಗಳಲ್ಲಿ ಸರಕು ಸಾಮಾಗ್ರಿಗಳ ಮಾರಾಟ ಮಾಡುವ ಹಕ್ಕು ಮಾತ್ರ ಇರುತ್ತದೆ. ವಿನಃ ಮಳಿಗೆಗಳ ಸ್ವಾಧೀನ ನಗರಸಭೆಯ ಅನುಮತಿ ಇಲ್ಲದೆ ಯಾವುದೇ ರಿಪೇರಿ/ ಬದಲಾವಣೆ ಮಾಡಲು ಅವಕಾಶರುವುದಿಲ್ಲ.
17. ಖಾಯಂ ಬಿಡ್ಡುದಾರರು 1964 ರ ಕರ್ನಾಟಕ ಪುರಸಭಾ ಕಾಯಿದೆ ಪ್ರಕರಣ 256 ರ ಪ್ರಕಾರ ಉದ್ದಿಮೆ ಪರವಾನಗಿ ಪಡೆಯತಕ್ಕದ್ದು.
18. ಅಖೈರು ಪರವಾನಗಿ ಫೀ ಪಾವತಿದಾರರು ಷರತ್ತುಗಳಿಗೆ ಅನುಗುಣವಾಗಿ ಸ್ವಂತ ಖರ್ಚಿನಿಂದ ನೊಂದಾಯಿತ ಕರಾರು ಮಾಡಿಸಿಕೊಟ್ಟು ನಂತರ ನಗರಸಭೆ ವತಿಯಿಂದ ಸಂಬಂಧಿಸಿದ ಉದ್ದೆಮೆಗೆ ಲೈಸೆನ್ಸ್‌ನ್ನು ಪಡೆದು ಪ್ರಾರಂಭಿಸತಕ್ಕದ್ದು. ಸರ್ಕಾರ ನಿಷಿದ್ದವೆಂದು ಪ್ರಕಟಿಸಿದ ವಸ್ತುಗಳನ್ನು ಯಾವುದೇ ಪಟಾಕಿ, ಸ್ಫೋಟಕ ವಸ್ತುಗಳನ್ನು ಮಾರತಕ್ಕದಲ್ಲ. ಮತ್ತು ಅನೈತಿಕ ಚಟುವಟಿಕೆಗಳನ್ನು ನಿಷೇದಿಸಲಾಗಿದೆ.
19. ಚಾಲ್ತಿಯಲ್ಲಿರುವ ಎಲ್ಲಾ ಕಾನೂನುಗಳು ಅನ್ವಯಿಸುತ್ತದೆ.

ಷರಾ :

ಇಸ್ತಿಹಾರ್‌ನಲ್ಲಿ ಕಂಡ ಷರತ್ತುಗಳಿಗೆ ಬದಲಾವಣೆ ಮಾಡಲು ಹರಾಜು ವೇಳೆಯಲ್ಲಿ ಅವಶ್ಯ ಕಂಡು ಬಂದ ನಿಬಂದನೆಗಳನ್ನು ಸೇರಿಸಲು ಆಡಳಿತಾಧಿಕಾರಿಗಳು/ಪೌರ ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದವರಾಗಲಿ ಬದಲಾವಣೆಮಾಡಲು ಅವಕಾಶವಿರುತ್ತದೆ.

ಸಹಿ/-
ಪೌರ ಆಯುಕ್ತರು,
ನಗರಸಭೆ ಚಿಕ್ಕಮಗಳೂರು